13

# ಒತ್ತಾಯದಿಂದ ಒಬ್ಬ ಅರಸನು
## (6:1-15)

ಉಗಾಂಡದಲ್ಲಿ ಬಸೋಗಾ ಜನರ ಮಧ್ಯದಲ್ಲಿ ಕೆಲಸ ಮಾಡುತ್ತಿದ ಒಬ್ಬ ಮಿಶನರಿ, ಜೊನ್ ಬಾರ್ಟನ್, ಎರಡು ಭಿನ್ನವಾದ ಬೈಬಲ್‌ಗಳನ್ನು ಓದಲು ಬಹಳ ಪ್ರಯತ್ನ ಮಾಡುತ್ತಿದ್ದ ಒಬ್ಬ ಮುದುಕ ಮನುಷ್ಯನನ್ನು ಒಂದು ಗ್ರಾಮದಲ್ಲಿ ಭೇಟಿಯಾದನು. ಯಾವುದೆ ಬೈಬಲು ಅವನ ಭಾಷೆಯಲ್ಲಿ ಬರೆಯಲ್ಪಟ್ಟಿರಲಿಲ್ಲ, ಆದುದರಿಂದ ಮುದುಕ ಮನುಷ್ಯನು ಪದಗಳನ್ನು ಅರ್ಥಮಾಡಿಕೊಳ್ಳಲು ಹೋರಾಡುತ್ತಿದ್ದನು. ಜೊನನು ಬಸೊಗಾ ಭಾಷೆಯನ್ನು ಹೆಚ್ಚಾಗಿ ಮಾತನಾಡದಿದ್ದರು, ಹಾಗೂ ಮುದುಕನು ಹೆಚ್ಚಾಗಿ ಇಂಗ್ಲೀಷ್ ಭಾಷೆಯನ್ನು ಮಾತನಾಡದಿದ್ದರೂ, ಆ ಮನುಷ್ಯನು ಏನನ್ನು ಓದಲು ಪ್ರಯತ್ನಿಸುತ್ತಿರುವವನು ಎಂಬುದರ ಬಗ್ಗೆ ಕೆಲ ಸಮಯದವರೆಗೆ ಅವರು ಮಾತನಾಡಿದರು. ಅವನು ಜೊನ್‌ಗೆ, ಬಸೊಗಾ ಜನರಿಗಿದ್ದ ಸಮಸ್ಯೆಯು, ಬೈಬಲಿನ ಸಂದೇಶವನ್ನು ಸ್ವೀಕರಿಸಲಿಕ್ಕೆ ಬಸೊಗಾವು "ನಿನ್ನ ಭಾಷೆಯನ್ನು ಕೊಂಡುಕೊಳ್ಳುವುದು" ಆಗಿತ್ತು ಎಂದು ಹೇಳಿದನು. ಮೊದಲಿಗೆ ಜೊನ್‌ನಿಗೆ ತಾನು ಕೇಳುತ್ತಿರುವದನ್ನು ಅರ್ಥಮಾಡಿಕೊಳ್ಳಲಿಕ್ಕಾಗಲಿಲ್ಲ. ಕೊನೆಗೆ, ಮುದುಕನು ಇಂಗ್ಲೀಷ್ ನಲ್ಲಿ ಬೈಬಲನ್ನು ಓದಲು ಮತ್ತು ಚರ್ಚಿಸಲು ಸಾಮರ್ಥ್ಯವನ್ನು ಪಡೆದು ಕೊಳ್ಳಲು, ಇಂಗ್ಲೀಷ್ ಮಾತನಾಡಲು ಶಾಲೆಗಳಲ್ಲಿ ಜನರು ಶಾಲ ಫೀಜುಗಳನ್ನು ಕೊಟ್ಟು ಇಂಗ್ಲೀಷ್ ಅಭ್ಯಾಸ ಮಾಡಬೇಕಾಗಿರುವದೆಂದು ಹೇಳು ತ್ತಿದ್ದಾನೆ ಎಂಬುದನ್ನು ಅವನು ಅರಿತುಕೊಂಡನು.

ಜೊನ್‌ನು ತನ್ನ ಉತ್ತರವನ್ನು ಪುನಃ ಹೇಳಿದನು:

> ಬಸೊಗಾಕ್ಕೆ "ಉಚಿತವಾಗಿ" ಸಂದೇಶವನ್ನು ತರಲಿಕ್ಕಾಗುವಂತೆ, ನಾನು ಅವನ ಭಾಷೆಯನ್ನು ಕಲಿಯುತ್ತಿರುವೆನೆಂದು ಮುದುಕನಿಗೆ ಹೇಳಿದನು. ಅವನು ಚಕಿತಗೊಂಡನು, ಮತ್ತು ತನ್ನನ್ನು ನೋಡಲು ನಾನು ಹಿಂದಿರುಗಿ ಬರಬೇಕೆಂಬುದನ್ನು ಅವನು ಬಯಸಿದನು.
>
> "ವಾಕ್ಯವೆಂಬಾತನು ನರಾವತಾರ ಎತ್ತಿ, ನಮ್ಮ ಮಧ್ಯದಲ್ಲಿ ವಾಸಿಸಿದನು" ಬೇರೆ ಮಾತುಗಳಲ್ಲಿ, ಯೇಸುವು ನಮ್ಮ ಬಳಿಗೆ ಬಂದನು, ಆತನು ನಮ್ಮ ನಮ್ಮ ಭಾಷೆಯನ್ನು ಮಾತಾಡಿದನು. ಆತನು ನಮ್ಮ ಜಗತ್ತಿನಲ್ಲಿ ಜೀವಿಸಿದನು. ಆತನು ನಮ್ಮಲ್ಲಿ ಒಬ್ಬನಾದನು ಆತನು ಬಿರುಕಿಗೆ ಸೇತುವೆ ಹಾಕಿದನು; ಅದನ್ನು ಮಾಡುವಂತೆ ಆತನು ನಮಗೆ ಬಿಡುವದಿಲ್ಲ. ಮತ್ತು ಈ ವಿಧಾನದಲ್ಲಿ, ಆತನು ತನ್ನ ಮಹಿಮೆಯನ್ನು ತೋರಿಸಿದನು, "ಆ ಮಹಿಮೆಯು ತಂದೆಯ ಬಳಿಯಿಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ. ಆತನು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿದ್ದನು."[1]

ಜೊನ್ ಬಾರ್ಟನ್‌ನಂಥವರು ಯೇಸುವಿನ ಕಥೆಯನ್ನು ಹಂಚಿಕೊಳ್ಳುವಾಗಲೆಲ್ಲಾ ದೇವರ ಮಹಿಮೆಯು ಪ್ರಕಟಿಸಲ್ಪಟ್ಟಿದೆ. ಯೋಹಾನ 6:1-15ರಲ್ಲಿ, ಈ ಸಲ ಯೇಸುವು ಐದು ಸಾವಿರ ಜನರಿಗೆ ಊಟ ಮಾಡಿಸಿದ್ದರ ಕಥೆಯಲ್ಲಿ, ದೇವರ ಮಹಿಮೆಯು ಪುನಃ ಕಂಡು ಬಂದಿದೆ.

## ಕಥೆ (6:1-15)

ಅಧ್ಯಾಯ 5 ಯೆರೂಸಲೇಮಿನಲ್ಲಿ ಯೆಹೂದ್ಯರ ಒಂದು ಹಬ್ಬದ ಸಮಯದಲ್ಲಿ ಯೇಸುವಿನ ಬೋಧನೆಯನ್ನು ದಾಖಲೆ ಮಾಡುತ್ತದೆ. ಅಧ್ಯಾಯ 6 ಗಲಿಲಾಯದ ಕ್ಷೇತ್ರದಲ್ಲಿ ಯೇಸುವು ಹಿಂದಿರುಗಿ ಬಂದದ್ದನ್ನು, ತನ್ನ ಶಿಷ್ಯರೊಂದಿಗೆ ಗಲಿಲಾಯ ಸಮುದ್ರವನ್ನು ದಾಟಿದ್ದನ್ನು ಹೇಳುತ್ತದೆ. ಆ ಸಮಯಕ್ಕೆ ಆತನ ಪ್ರಸಿದ್ಧಿಯು ಬಹಳವಾಗಿ ಹಬ್ಬಿತು. ಆತನು ಮಾಡುತ್ತಿದ್ದ ಅದ್ಭುತಕರವಾದ "ಸೂಚಕ ಕಾರ್ಯಗಳ" ಬಗ್ಗೆ ಜನರು ಮಾತಾಡುವುದನ್ನು ಮುಂದುವರಿಸಿದರು. ವಚನ 2ರಲ್ಲಿ ಮೂರು ಕ್ರಿಯಾ ಪದಗಳು ಗ್ರೀಕ್‌ನಲ್ಲಿ ಅಪೂರ್ಣಕಾಲದಲ್ಲಿರುವವುಗಳನ್ನು ಒಳಗೊಂಡಿದೆ; ಇದು ಸತತವಾದ ಕಾರ್ಯವನ್ನು ಸೂಚಿಸುತ್ತದೆ. ಬೇರೆ ಮಾತುಗಳಲ್ಲಿ, ಈ ವಾಕ್ಯಭಾಗದ ಅರ್ಥವು, "ಒಂದು ದೊಡ್ಡ ಜನಸಮೂಹವು *ಬರುತ್ತಲೇ ಇತ್ತು*, ಯಾಕಂದರೆ ಅವರು ಯೇಸುವು ಮಾಡುವದನ್ನು *ಮುಂದುವರಿಸಿದ್ದನ್ನು ನೋಡುವದಕ್ಕಾಗಿ* ಬಂದರು." (ಒತ್ತಿ ಹೇಳಿದ್ದು ನನ್ನದು.)

ಯೇಹಾನನಿಂದ ಮುಂದೆ ಕೂಡಿಸಿದ ವಿವರಣೆಯು, "ಯೆಹೂದ್ಯರ ಪಸ್ಕ ಹಬ್ಬವು ಹತ್ತಿರವಾಗಿತ್ತು" (6:4) ಎಂಬುದು, "ಯೆಹೂದ್ಯರ ಪಸ್ಕ ಹಬ್ಬವು ಹತ್ತರವಾಗಿದ್ದಾಗ" (2:13ಎ) ದೇವಾಲಯದ ಶುದ್ಧೀಕರಣವು ಮಾಡಲ್ಪಟ್ಟಿತು. ಈ ಚಿಕ್ಕ ವಿವರಣೆಯೆಂದು ತೋರುವಂಥದ್ದು ಬಹುಶಃ ಯಾಕೆ ಅಷ್ಟು ಬಹಳ ಜನರು ಯೇಸುವನ್ನು ನೋಡಲಿಕ್ಕೆ ಹಾಗೂ ಕೇಳಲಿಕ್ಕೆ ಬಂದರು ಎಂಬುದನ್ನು ವಿವರಿಸುತ್ತದೆ. ಮೊದಲನೆಯ ಶತಮಾನದ ಇಸ್ರಾಯೇಲ್ಯರಲ್ಲಿ ಪಸ್ಕ ಹಬ್ಬದ ಸಮಯವು ದೇಶಾಭಿಮಾನವನ್ನು ಉಕ್ಕಿಸುವ ಸಮಯವಾಗಿತ್ತು. ಪ್ರತೀ ವರ್ಷ ಯೆಹೂದ್ಯರು ಯೆರೂಸಲೇಮಿನಲ್ಲಿ ಕೂಡಿಬರುತ್ತಿದ್ದರು ಮತ್ತು ತಮ್ಮ ರೋಮನ್ ಅಧಿಪತಿಗಳನ್ನು ತೆಗೆದು ಹಾಕಿ, ಇಸ್ರಾಯೇಲಿನ ಸ್ವತಂತ್ರ ಮತ್ತು ಸ್ವಾಯತ್ತೆಯ ರಾಜ್ಯವನ್ನು ಪುನಃ ಸ್ಥಾಪಿಸಲು ಮೆಸ್ಸೀಯನು ಬರುವನೋ ಎಂಬುದನ್ನು ನೋಡಲು ಕಾಯುತ್ತಿದ್ದರು.

ಪರಿಣಾಮವಾಗಿ, ಯೇಸುವು ಗಲಿಲಾಯದ ಜನರ ಅದ್ಭುತಕಾರ್ಯಗಳನ್ನು ಮಾಡುವದರಿಂದ ಕುತೂಹಲ ಕೆರಳಿಸಿದಾಗ *ಹಾಗೂ* ಪಸ್ಕ ಹಬ್ಬವು ಸಮೀಪಿಸಿದಾಗ, ಯೇಸುವು ಯೆಹೂದ್ಯರು ತಾವು ಅನೇಕ ವರ್ಷಗಳಿಂದ ನಿರೀಕ್ಷಿಸುತ್ತಿದ್ದ ಇಸ್ರಾಯೇಲಿನ ಅರಸನಾಗಿರಬಹುದೆಂಬ ಬಲವಾದ ನಿರೀಕ್ಷೆಗಳಿಂದ ತುಂಬಿಕೊಂಡಿದ್ದರು. ಆ ದಿನ ಐದು ಸಾವಿರ ಜನರು (6:10) ಯೇಸುವನ್ನು ಹಿಂಬಾಲಿಸಿದಾಗ, ಅವರು ಕುತೂಹಲದಿಂದ ಬಂದ ಕೇವಲ ಸಾಮಾನ್ಯ ಕೇಳುಗರಾಗಿರಲಿಲ್ಲ. ಅದರ ಬದಲು, ಅವರು ಯುದ್ಧದಲ್ಲಿ ಮೆಸ್ಸೀಯನನ್ನು ಹಿಂಬಾಲಿಸಲು ಸಿದ್ಧರಾಗಿದ್ದ ಬಿಸಿ ರಕ್ತದ ಯೆಹೂದೀ ಹೋರಾಟಗಾರರಾಗಿದ್ದರು. ಯೇಸುವನ್ನು ಆಲಿಸುವದಕ್ಕಾಗಿ ಗಲಿಲಾಯ ಸಮುದ್ರದ ಒಳಗೆ ಹೋಗಲು ಒಕ್ಕಲಿಗರು ತಮ್ಮ ಗುದ್ದಲಿಗಳನ್ನು ಕೆಳಗಿಟ್ಟರು ಮತ್ತು ಅಂಗಡಿಕಾರರು ತಮ್ಮ ವ್ಯಾಪಾರವನ್ನು ಬಂದು ಮಾಡಿದರು.

ಯೇಸುವು ಪ್ರಚಂಡವಾದ ಜನರಗುಂಪು ಪರ್ವತದ ಬಳಿಯಲ್ಲಿ ತನ್ನ ಬಳಿಗೆ ಬರುತ್ತಿರುವದನ್ನು ನೋಡಿದಾಗ, ಸ್ಥಳೀಯನಾದ (1:44) ಫಿಲಿಪ್ಪನಿಗೆ, "ಇವರ ಊಟಕ್ಕೆ ನಾವು ಎಲ್ಲಿಂದ ರೊಟ್ಟಿ ಕೊಂಡುತರೋಣ?" ಎಂದು ಹೇಳಿದನು (6:5ಬಿ). ಯೇಸು ಮಾಡಿದ ಇತರ ಸೂಚಕ ಕಾರ್ಯಗಳ ಬಗ್ಗೆ ತಿಳಿದವನಾಗಿದ್ದರೂ, ಪ್ರತಿಯೊಬ್ಬಬ್ಬನಿಗೆ ಸ್ವಲ್ಪ ಸ್ವಲ್ಪ ಆಹಾರ ಸಿಕ್ಕಬೇಕಾದರು ಎಂಟು ತಿಂಗಳದ ಸಂಭಳವೂ ಸಾಕಷ್ಟನ್ನು ಕೊಳ್ಳಲಿಕ್ಕೆ ಸಾಲದು ಎಂದು ಅವನು ತನ್ನ ಅಲ್ಪ ವಿಶ್ವಾಸವನ್ನು ಪ್ರದರ್ಶಿಸಿದನು (6:7). ಎಲ್ಲಾ ಸಮಯದಲ್ಲಿ ಯೇಸುವು ಜನರ ಗುಂಪಿಗಾಗಿ ಏನು ಮಾಡಬೇಕೆಂಬುದನ್ನು ತಿಳಿದಿದ್ದನು.

ಆ ಹಂತದಲ್ಲಿ, ಅಂದ್ರೇಯನು ಯೇಸುವಿಗೆ ಜನರ ಗುಂಪಿನಲ್ಲಿ ಒಬ್ಬ ಚಿಕ್ಕ ಬಾಲಕನ[2] ಹತ್ತಿರ "ಐದು ರೊಟ್ಟಿ ಮತ್ತು ಎರಡು ಮೀನುಗಳು" ಇವೆಯೆಂದು ತಿಳಿಸಿ, "ಇಷ್ಟು ಜನರಿಗೆ ಅವು ಯಾತಕ್ಕಾದಾವು?" ಎಂದು ಕೇಳಿದನು (6:9). ಅಂದ್ರೇಯನು ಯೇಹಾನನ ಪುಸ್ತಕದಲ್ಲಿ ಮುಖ್ಯವಾಗಿ ಯೇಸುವಿನ ಬಳಿಗೆ ಇತರರನ್ನು ಕರೆದು ಕೊಂಡವನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಾನೆ.[3]

ಆಧುನಿಕ ವಾಚಕನು “ರೊಟ್ಟಿ” ಮತ್ತು “ಮೀನು” ಎಂಬುದನ್ನು ಇಂದು ಪೇಟೆಯಲ್ಲಿ ಕೆಲವು ಸಲ ಕಾಣುವಂಥ ರೀತಿಯಲ್ಲಿ ವಿವರಿಸದಿರುವಂತೆ ಜಾಗರೂಕರಾಗಿರಬೇಕು, ರೊಟ್ಟಿಗಳು ಬಹುಶಃ ಚಿಕ್ಕವಾದ, ದುಂಡನೆಯ ಬಾರ್ಲಿ ರೊಟ್ಟಿಗಳಾಗಿದ್ದವು (ಸಾಂಯಕಾಲದ ಊಟದ ರೋಲ್‌ಗಳಿಗಿಂತ ದೊಡ್ಡ ಅಳತೆಯವು). ಅವು ಅಂದು ಬಡ ಮನುಷ್ಯನ ದಿನದ ಆಹಾರ ವಾಗಿತ್ತು. ಮೀನುಗಳು ಬಹುಶಃ ಕಚ್ಚಲು ಸರಿಯಾದ ಗಾತ್ರದ ತುಂಡುಗಳಾಗಿದ್ದಿರ ಬಹುದು, ಅವು ಊಟಕ್ಕೆ ರುಚಿಕೊಡುವುದಕ್ಕಾಗಿದ್ದವು. ಹೀಗಿದ್ದರೂ, ದೇವರ ಕುಮಾರನಿಗೆ, ಅದು ಸಾಕಷ್ಟಕ್ಕಿಂತ ಹೆಚ್ಚಾಗಿತ್ತು.

ಜನರು ಹುಲ್ಲಿನ ಮೇಲೆ ಕುಳಿತುಕೊಳ್ಳುವಂತೆ ಮಾಡಬೇಕೆಂದು ಯೇಸುವು ಶಿಷ್ಯರಿಗೆ ಹೇಳಿದನು, ಅವರು ಹಾಗೆ ಮಾಡಿದರು. ಮುಂದೆ ಸಂಭವಿಸಿದ್ದು ನಂಬಲು ಸಾಧ್ಯವಾದಂಥದ್ದು ಆಗಿತ್ತು, ಯುಗಗಳಿಂದ ಐದು ರೊಟ್ಟಿ ಎರಡು ಮೀನುಗಳಿಂದ ಹೇಗೆ ಐದು ಸಾವಿರ ಜನರಿಗೆ ಊಟ ಮಾಡಲಿಕ್ಕೆ ಆಯಿತು ಎಂಬುದಕ್ಕೆ ಮಾನವ ವಿವರಣೆಗಳನ್ನು ಕಂಡುಕೊಳ್ಳಲು ಜನರು ಪ್ರಯತ್ನಿಸಿದ್ದಾರೆ. ಹೀಗಿದ್ದರೂ, ಯೋಹಾನನು ಇದು ಅಲ್ಲಗಳೆಯದಂಥ ಒಂದು ಅದ್ಭುತ ಕಾರ್ಯವಾಗಿದೆ, ಇದರಲ್ಲಿ ಯೇಸುವು ಆಹಾರವನ್ನು ತೆಗೆದುಕೊಂಡು, ಉಪಕಾರ ಹೇಳಿದನು, ಮತ್ತು ರೊಟ್ಟಿ ಹಾಗೂ ಮೀನು ಅಧಿಕವಾದವು ಎಂದು ದೃಢವಾಗಿ ಹೇಳಿದನು. ಜನರಿಗೆ “ಬೇಕಾದಷ್ಟು ಇತ್ತು” (6:11) ಮತ್ತು “ಅವರಿಗೆ ತೃಪ್ತಿಯಾದ ಮೇಲೆ” (6:12). ಮಿಕ್ಕ ತುಂಡುಗಳು ಹನ್ನೆರಡು ಬುಟ್ಟಿಗಳಲ್ಲಿ ತುಂಬಿಸಲ್ಪಟ್ಟವು. ಜನ ಸಮೂಹವು ಯುದ್ಧಕ್ಕೆ ಹೋಗಲು ಸಾಕಷ್ಟು ಬಲವುಳ್ಳ ಐದು ಸಾವಿರ ಜನ ಪುರುಷರನ್ನೊಳಗೊಂಡಿತ್ತು ಮತ್ತು ಹೆಚ್ಚು ಆಹಾರವನ್ನು ಊಟ ಮಾಡುವಷ್ಟು ಹಸಿವೆಯುಳ್ಳವರಾಗಿದ್ದರು ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಿರಿ.

ಜನರು ಸೂಚಕ ಕಾರ್ಯವನ್ನು ನೋಡಿದಾಗ (6:14), ಅವರು ಒಂದು ವಿಶೇಷವಾದ ರೀತಿಯಲ್ಲಿ ಯೇಸುವಿನ ಮೇಲೆ ದೇವರ ಹಸ್ತವಿರುವದೆಂಬುದನ್ನು ಗ್ರಹಿಸಿಕೊಂಡರು. ಆತನು ಲೋಕಕ್ಕೆ ಬರಬೇಕಾಗಿದ್ದ ಪ್ರವಾದಿ ಎಂದು ಹೇಳಿಕೊಂಡರು (6:14). ಬರಲಿಕ್ಕಿದ್ದ ಪ್ರವಾದಿಯ ನಿರೀಕ್ಷೆಯು ಈ ಹೇಳಿಕೆಯನ್ನು ಮೋಶೆಯು ಕೊಟ್ಟ ಧರ್ಮಶಾಸ್ತ್ರದ ಬೋಧನೆಯ ಮೇಲೆ ಅವಲಂಭಿಸಿತ್ತು; “ನಿಮ್ಮ ದೇವರಾದ ಯೆಹೋವನು ನಿಮ್ಮ ಸಹೋದರರಲ್ಲಿ ನನ್ನಂಥ ಪ್ರವಾದಿಯನ್ನು [ನಿಮಗೆ] ಏರ್ಪಡಿಸುವನು; ಅವನಿಗೆ ನೀವು ಕಿವಿಗೊಡಬೇಕು” (ಧರ್ಮೋಪದೇಶ ಕಾಂಡ 18:15).

ಕೆಲವು ವಚನಗಳ ನಂತರ ಮೋಶೆಯು ಕರ್ತನ ಮಾತುಗಳನ್ನು ಉಲ್ಲೇಖಿಸಿದನು; “ಇವರ ಸ್ವದೇಶದವರಲ್ಲಿ ನಿನ್ನಂಥ ಪ್ರವಾದಿಯನ್ನು ಅವರಿಗೋಸ್ಕರ ಏರ್ಪಡಿಸುವೆನು; ಅವನ ಬಾಯಿಂದ ನನ್ನ ಮಾತುಗಳನ್ನು ನುಡಿಸುವೆನು; ನಾನು ಅವನಿಗೆ ಆಜ್ಞಾಪಿಸಿದ್ದನ್ನೆಲ್ಲಾ ಅವನು ಅವರಿಗೆ ತಿಳಿಸುವನು” (ಧರ್ಮೋಪದೇಶ ಕಾಂಡ 18:18). ತಮ್ಮ ಕಿವಿಗಳಲ್ಲಿ ಪ್ರತಿಧ್ವನಿಸುತ್ತಿರುವ ಈ ಮಾತುಗಳಿಂದ, ತಮ್ಮ ಹೃದಯದಲ್ಲಿ ಉರಿಯುತ್ತಿರುವ ದೇಶಾಭಿಮಾನದ ಕನಸುಗಳಿಂದ, ಮತ್ತು ತಮ್ಮ ಗಡ್ಡಗಳಿಗೆ ಅಂಟಿಕೊಂಡಿರುವ ತಮ್ಮ ಊಟದ ಉಳುಹುಗಳಿಂದ, ಮುಂದೆ ಕ್ರಾಂತಿಕಾರಿಗಳಾಗಿರುವ ಐದು ಸಾವಿರ ಜನರು “ಬಂದು ತನ್ನನ್ನು ಹಿಡುಕೊಂಡು ಹೋಗಿ ಅರಸನನ್ನಾಗಿ ಮಾಡಬೇಕೆಂದಿದ್ದರು” (6:15). ಅಂಥ ಉದ್ದೇಶವು ಹಗುರವಾಗಿ ತೆಗೆದುಕೊಳ್ಳಲ್ಪಡಬಾರದು. ಆದರು ಯೇಸುವನ್ನು ಅರಸನನ್ನಾಗಿ ಮಾಡಿದ್ದರೆ, ರೋಮಿನ ಬಲಗಳು ಅದರ ಕೃತ್ಯಗಳನ್ನು ಯುದ್ಧದ ಒಂದು ಸಾರುವಿಕೆಯೆಂದು ನೋಡುತ್ತಿದ್ದವು. ಒಬ್ಬ ಅರಸನು ಸಿಂಹಾಸನದ ಮೇಲೆ ಕೂಡ್ರಿಸಲ್ಪಡ ಬೇಕಾದರೆ ಇನ್ನೊಬ್ಬನು ಸಿಂಹಾಸನದಿಂದ ತಳ್ಳಲ್ಪಡಬೇಕಾಗುತ್ತದೆ. ಹಾಗಿದ್ದರೂ, ಅದು ಅವರ ಉದ್ದೇಶವಾಗಿತ್ತು.

### ಕಥೆಯ ಉಳಿದ ಭಾಗ

ಮೂಲ ಪಾಠದಲ್ಲಿ ಮುಂದೆ ಹೋಗುವ ಮೊದಲು, ಆ ದಿನದಂದು ಐದು ಸಾವಿರ

ಜನರು ಏನನ್ನು ವಿಚಾರಿಸುತ್ತಿದ್ದರೆಂಬುದನ್ನು ಕಲ್ಪಿಸೋಣ. ಒಮ್ಮೆ ಅವರು ಯೇಸುವನ್ನು ತಮ್ಮ ಅರಸನೆಂದು ಘೋಷಿಸಿದ ಮೇಲೆ ಏನನ್ನು ಸಂಭವಿಸಲಿಕ್ಕೆ ಅವರು ನಿರೀಕ್ಷಿಸುವರು? ಇದೀಗ ಯೇಸುವಿನ ಅದ್ಭುತ ಕಾರ್ಯದ ಊಟದಿಂದ ತಮ್ಮ ಹೊಟ್ಟೆ ತುಂಬಿಸಿಕೊಂಡ ನಂತರ, ಅವರು ಬಹುಶಃ ಯೇಸುವು ಎಲ್ಲಿಂದಲೋ ಒಂದು ಖಡ್ಗವನ್ನು ಕಂಡುಕೊಂಡು ಅದನ್ನು ಈ ಒಕ್ಕಲಿಗರ ಮತ್ತು ವ್ಯಾಪಾರಸ್ಥರ ಸೈನ್ಯಕ್ಕೆ ಸನ್ನದ್ಧಗೊಳಿಸಲು ಬಹು ಸಂಖ್ಯೆಯಲ್ಲಿ ಅದನ್ನು ಮಾರ್ಪಡಿಸುವನು, ಬಹುಶಃ ನಿರೀಕ್ಷಿಸಿದರು. ಆ ಮೇಲೆ ತಮ್ಮ ಖಡ್ಗಗಳು ಸೂರ್ಯ ಪ್ರಕಾಶದಲ್ಲಿ ಹೊಳೆಯುತ್ತಿರುವದರೊಂದಿಗೆ, ಅವರು ಗಲಿಲಾಯ ಸಮುದ್ರದ ಆಚೆಗೆ ಟಿಬೇರಿಯಕ್ಕೆ ವಿರುದ್ಧ ವಾಗಿ ಹೊರಾಡುವರು. ಅವರು ಮಿತಿಮೀರಿದ ಸಂಖ್ಯೆಯಲ್ಲಿ ಪಟ್ಟಣವನ್ನು ಮುತ್ತಿ, ತಮ್ಮ ಅಂತಿಮ ಗುರಿಯಾದ ಯೆರೂಸಲೇಮಿಗೆ ದಂಡೆತ್ತಿ ಹೋಗುವರು. ಅದು ಪಸ್ಕ ಹಬ್ಬದ ಕಾಲ ವಾಗಿದ್ದುದರಿಂದ, ಅಲ್ಲಿ ರೋಮನ್ ಸೈನ್ಯವು ಇಡಲ್ಪಟ್ಟಿರುವದನ್ನು ಕಂಡುಕೊಳ್ಳುವರು. ಯುದ್ಧ ವು ಕಠಿಣವಾದದ್ದಾಗಿರುವುದು, ಆದರೆ ಅಂತ್ಯದಲ್ಲಿ ರೋಮನ್‌ರು ಸೋಲಿಸಲ್ಪಡುವರು.

ಯೇಸು ಮತ್ತು ಆತನ ಸಾಮಾನ್ಯ ಸೈನ್ಯವು ದೇವಾಲಯವನ್ನು ಅದರ ಎಲ್ಲಾ ಅಶುದ್ಧ ತೆಯನ್ನು ಶುದ್ಧೀಕರಿಸುವುದು ಮತ್ತು ಸದ್ದುಕಾಯರು ಅದರ ಅಧಿಕಾರದ ಸ್ಥಾನಗಳಿಂದ ದೊಬ್ಬಲ್ಪಡುವರು. ಯೆರೂಸಲೇಮು ವಶಪಡಿಸಿಕೊಂಡದ್ದರ ವರ್ತಮಾನವು ರೋಮಿಗೆ ತಲುಪು ವಾಗ, ರೋಮಿನ ಬಲಶಾಲಿ ಸೈನ್ಯಗಳು ಯೇಸುವಿಗೂ ಆತನ ಸೇನೆಗೂ ವಿರುದ್ಧವಾಗಿ ತರಲ್ಪಡುವವು. ಚಮತ್ಕಾರದಿಂದ ಮತ್ತು ನಿರ್ಣಯಾತ್ಮಕವಾದ ಹೋರಾಟದಲ್ಲಿ ಯೆಹೂದ್ಯರು ರೋಮನ್ನರನ್ನು ಸದೆಬಡಿದು ನೂತನ ಜಗತ್ತಿನ ಸಾಮ್ರಾಜ್ಯವಾ ಗುವರು, ಯೇಸುವಿನ ಐದು ಸಾವಿರ ಜನರ ಸೈನ್ಯವಾಗಬಹುದಾದ ಸಾಮಾನ್ಯ ಸದಸ್ಯನು ಬಹುಶಃ ಇದು ಸಂಭವಿಸ ಬಹುದೆಂದು ಯೋಚಿ ಸಿದನು! ಹೀಗಿದ್ದರೂ, ಯೇಸುವಿನ ಮನಸ್ಸಿನಲ್ಲಿ ಬೇರೆ ಯಾವುದೋ ಇತ್ತು.

## ಅವರ ಮತ್ತು ನಮ್ಮ ತಪ್ಪು

ನಿರೀಕ್ಷೆಗಳು ಹೆಚ್ಚಾಗುವಂತೆ ಮತ್ತು ಭಾವೋದ್ರೇಕವು ಆವೇಶದ ಮಟ್ಟಕ್ಕೇರುವಂತೆ, ಯೇಸುವು ಅತ್ಯಂತ ಅನಿರೀಕ್ಷಿತವಾದ ಸಂಗತಿಯನ್ನು ಮಾಡಿದನು. ಆತನು "ತಿರುಗಿ ತಾನೊಬ್ಬನೇ ಒಂಟಿಗನಾಗಿ ಬೆಟ್ಟಕ್ಕೆ ಹೋಗಿ ಬಿಟ್ಟನು" (6:15). ಆ ದಿನದಲ್ಲಿ ತಾನು ಏನು ಮಾಡುತ್ತಿದ್ದೇನೆಂದು ಅರ್ಥಮಾಡಿಕೊಂಡಾತನು ಬೆಟ್ಟದ ಮೇಲೆ ಬಹುಶಃ ಆತನೊಬ್ಬನೇ ಆಗಿದ್ದನು. ಹನ್ನೆರಡು ಜನರಿಗೆ ಮತ್ತು ಇತರ ಐದು ಸಾವಿರ ಹಿಂಬಾಲಕರಿಗೆ, ಅದು ಯೇಸುವು ಸಾಧಿಸಲು ಅಷ್ಟು ಕಠಿಣವಾಗಿ ಕೆಲಸ ಮಾಡಿದಾತನು ತನ್ನ ಗುರಿಯನ್ನು ಬಿಟ್ಟು ನಡೆದು ಹೋದ ನೆಂಬಂತೆ ತೋರಿಸಬಹುದು.

ನಾನು ಯೋಚಿಸುವ ಅತ್ಯುತ್ತಮವಾದ ಹೋಲಿಕೆಯು ತನ್ನ ದೇಶದ ನಾಯಕನಾಗಲು ತನ್ನ ಜೀವನದ ನಾಲ್ಕು ವರ್ಷಗಳನ್ನು ಸಮರ್ಪಿಸಿದ ಒಬ್ಬ ವ್ಯಕ್ತಿಯನ್ನು ಒಳಗೊಂಡಿರುತ್ತದೆ. ಹುದ್ದೆಗಾಗಿ ತನ್ನ ಉಮೇದುವಾರಿಕೆಯನ್ನು ಪ್ರಚಾರ ಪಡಿಸಲು ಅವನು ದೀರ್ಘಕಾಲ ಕೂಟ ನಡಿಸಿದನು ಮತ್ತು ಪ್ರತೀ ವರ್ಷ ಐವತ್ತೆರಡು ವಾರ ಪ್ರಯಾಣ ಮಾಡಿದನು. ಅಂತಿಮವಾಗಿ, ಅವನ ಕಠಿಣವಾದ ಕೆಲಸವು ಫಲ ಕೊಡುತ್ತದೆ; ಪ್ರಾಥಮಿಕ ಚುನಾವಣೆಗಳಲ್ಲಿ, ತನ್ನ ಪಕ್ಷದ ನಾಮ ನಿರ್ದೇಶನವನ್ನು ಪಡೆಯಲು ಅಗತ್ಯವಾದ ಪ್ರತಿನಿಧಿಗಳನ್ನು ಗೆದ್ದು ಕೊಂಡನು. ಹೀಗಿ ದ್ದರೂ ಸಮಾರಂಭವು ಏರ್ಪಡಿಸಲ್ಪಟ್ಟಾಗ, ನಾಮ ನಿರ್ದೇಶನ ಮತ ಚಲಾಯಿಸಲ್ಪಟ್ಟಾಗ, ಯೋಚಿಸಲಾಗದಂಥದ್ದು ಸಂಭವಿಸಿತು. ಸಾವಿರಾರು ಜನರು ತಮ್ಮ ಬೆಂಬಲವನ್ನು ಸೂಚಿಸಿ ಕೂಗುತ್ತಿರುವಾಗ, ಅಭ್ಯರ್ಥಿಯ ಹೆಸರುಳ್ಳ ಸಂಕೇತಗಳನ್ನು ತೋರಿಸುತ್ತಿರುವಾಗ, ಆ ಮನುಷ್ಯನು ಪಕ್ಕನೇ ತನ್ನ ಖುರ್ಚಿಯಿಂದ ಮೇಲಕ್ಕೆದ್ದು ಸಮಾರಂಭದ ಕೇಂದ್ರದಿಂದ ಹೊರಟು ಹೋಗು ತ್ತಾನೆ. ಅಂಥ ಕೃತ್ಯವು ಯೋಚಿಸಲಾಗದಂಥದ್ದಾಗಿದೆ - ಐದು ಸಾವಿರ ಜನರು ಯೇಸುವನ್ನು ತಮ್ಮ ಅರಸನನ್ನಾಗಿ ಮಾಡಿ ಕೊಳ್ಳಲು ಸಿದ್ಧರಾಗಿದ್ದಾಗ ಆತನು ಮಾಡಿದ್ದು ಇನ್ನೂ ಹೆಚ್ಚು

ಯೋಚಿಸಲಾಗದಂಥದ್ದಾಗಿದೆ.

ಯೇಸುವು ಪುನಃ ತನ್ನ ಅಂತಿಮ ಗುರಿಯ ಮೇಲೆ ಕೇಂದ್ರೀಕರಿಸಿಕೊಂಡಿರಲು ತನ್ನ ಸಮಾಂತರವಿಲ್ಲದ ಸಾಮರ್ಥ್ಯವನ್ನು ಪ್ರದರ್ಶಿಸಿದನು. ಜನರ ಗುಂಪಿನ ಹೊಗಳಿಕೆಯ ಉದ್ದೇಶಗಳು ದೇವರ ಅಂತಿಮ ಉದ್ದೇಶವನ್ನು ನೆರವೇರಿಸಲಾರವು ಎಂಬುದನ್ನು ಆತನು ತಿಳಿದಿದ್ದನು; ಸಮುದ್ರದ ಬಳಿಯ ದಂಗೆಯು ಪಾಪದಿಂದ ಜಗತ್ತನ್ನು ರಕ್ಷಿಸಲಾರವು. ಇದಲ್ಲದೆ ಅವರ ಮನಸ್ಸಿನ ಇಂದಿನ ರಚನೆಯು ಅವರೊಂದಿಗೆ ವಿವೇಚನೆಯಿಂದಿರುವದಿಲ್ಲ, ಆದುದರಿಂದ, ಆತನು ಸುಮ್ಮನೇ ಹೊರಟು ಹೋದನು.

ಈ ಮೂಲ ಪಾಠದಿಂದ ''ಕನ್ನಡಿಯಲ್ಲಿ'' ಎರಡು ನೋಟಗಳು ನನ್ನನ್ನು ತೊಂದರೆಪಡಿಸುತ್ತವೆ. ನನ್ನ ಮೊದಲನೆಯ ಚಿಂತನೆಯು ನಮ್ಮ ಮಾವನ ಒಲವು ಯೇಸುವನ್ನು ನಮ್ಮ ಅಚ್ಚಿನೊಳಗೆ ಒತ್ತಾಯಿಸಲು ಪ್ರಯತ್ನಿಸುವುದಾಗಿದೆ. ಆತನು ತಾನು ಯಾರು ಆಗಿರುವನೆಂಬುದನ್ನು ನಮಗೆ ತೋರಿಸಲು ಬಿಡದೇ, ಯೇಸುವಿನ ಮೇಲೆ ನಮ್ಮ ನಿರೀಕ್ಷೆಗಳನ್ನು ಇಡಲು ನಾವು ಬಯಸುತ್ತೇವೆ. ಯೇಸುವು ನಮ್ಮಂತಿರುವನು ಎಂದು ನಾವು ಅನೇಕ ಸಲ ಊಹಿಸಿಕೊಳ್ಳುವದಿಲ್ಲವೇ? ಅಮೇರಿಕನ್‌ರು ಆತನನ್ನು ಒಬ್ಬ ಅಮೇರಿಕನ್‌ನಂತೆ ಯೋಚಿಸಲು ಮುಂದಾಗುತ್ತಾರೆ, ಇಟ್ಯಾಲಿಯನ್ನರು ಆತನನ್ನು ಒಬ್ಬ ಇಟ್ಯಾಲಿಯನ್ನನಂತೆ ಯೋಚಿಸುತ್ತಾರೆ. ಇಂಗ್ಲೀಷ್ ಮಾತಾಡುವ ಜನರು ಯೇಸುವು ಇಂಗ್ಲೀಷ್ ಮಾತಾಡಿದನೆಂದು ಭಾವಿಸುತ್ತಾರೆ. ಸ್ಪ್ಯಾನಿಶ್ ಮಾತಾಡುವ ಜನರು ಯೇಸುವು ಸ್ಪ್ಯಾನಿಶ್ ಭಾಷೆಯನ್ನು ಮೆಚ್ಚಿಕೊಂಡನು ಎಂಬ ನಿಶ್ಚಿತತೆಯಲ್ಲಿರುವಂತೆ ಕಾಣುತ್ತದೆ. ಐಶ್ವರ್ಯವಂತರು ಆತನನ್ನು ಐಶ್ವರ್ಯವಂತನಂತೆ ಕಾಣುತ್ತಾರೆ. ಮತ್ತು ಬಡ ಜನರು ಆತನನ್ನು ಬಡವನಂತೆ ನೋಡುತ್ತಾರೆ. ವಿದ್ಯಾವಂತರು ಆತನನ್ನು ವಿದ್ಯಾವಂತನಂತೆ ಚಿತ್ರಿಸುತ್ತಾರೆ, ಮತ್ತು ಅವಿದ್ಯಾವಂತರು ಆತನು ಅಭ್ಯಾಸದಲ್ಲಿಯ ತಮ್ಮ ಅಪನಂಬಿಕೆಯನ್ನು ಹಂಚಿಕೊಂಡಿದ್ದರ ಬಗ್ಗೆ ಭರವಸೆಯುಳ್ಳವರಾಗಿರುತ್ತಾರೆ. ಭಾವನಾತ್ಮಕ ಜನರು ಯೇಸುವನ್ನು ಭಾವನಾತ್ಮಕನಂತೆ ದೃಷ್ಟಿಸುತ್ತಾರೆ, ಶಾಂತವುಳ್ಳ ಜನರು ಯೇಸುವು ತಮ್ಮ ವಿಶ್ರಾಂತಿ ನಡವಳಿಕೆಯಲ್ಲಿ ಭಾಗವಹಿಸಿದನೆಂದು ಹೇಳುತ್ತಾರೆ. ಯೇಸುವು ಐದು ಸಾವಿರ ಜನರಿಂದ ಹೊರಟು ಹೋದದ್ದು, ಯೇಸುವಿನ ಮೇಲೆ ನಮ್ಮ ಸ್ವಂತ ನಿರೀಕ್ಷೆಗಳನ್ನಿಡುವಾಗ ನಾವು ಹೇಗೆ ತಪ್ಪಾಗಿರಬಹುದೆಂಬುದನ್ನು ನಮ್ಮ ಜ್ಞಾಪಕಕ್ಕೆ ತರುತ್ತದೆ. ಇಡೀ ಜಗತ್ತು ತಪ್ಪಾಗಿ ತಿಳಿದುಕೊಂಡರೂ ಆತನು ತನ್ನ ತಂದೆಯ ಚಿತ್ತವನ್ನು ಮಾಡುವುದರ ಮೇಲೆ ಒತ್ತುಕೊಟ್ಟನು.

ಈ ಚಿಕ್ಕ ವಾಕ್ಯಭಾಗವು ನಮಗೆ ಕೊಡುವ ಇನ್ನೊಂದು ಎಚ್ಚರಿಕೆಯು, ನಾವು ಸಹ ಅಲ್ಪಾವಧಿಯ ಸಮಸ್ಯೆಗಳಲ್ಲಿ ಸಿಕ್ಕಿಕೊಂಡು, ದೀರ್ಘಾವಧಿಯ ಪರಿಹಾರಗಳನ್ನು ಕಡೆಗಣಿಸಬಹುದು ಎಂಬುದು. ಯೇಸುವಿನ ದಿನದ ಯೆಹೂದ್ಯರು ರೋಮನ್‌ರ ದಬ್ಬಾಳಿಕೆಯಲ್ಲಿದ್ದರು. ಯಾರಾದರೊಬ್ಬರು ಇಸ್ರಾಯೇಲಿಗೆ ರಾಜಕೀಯ ಸ್ವಾತಂತ್ರ್ಯವನ್ನು ತರುವ ಸಮಯಕ್ಕಾಗಿ ನಿರೀಕ್ಷಿಸುತ್ತ, "ಲೋಕದ ಪಾಪವನ್ನು ನಿವಾರಣೆ ಮಾಡುವ ದೇವರು ನೇಮಿಸಿದ ಕುರಿಯನ್ನು" (1:29) ಅವರು ಕಡೆಗಣಿಸಿದರು. ನಾವು ಎಂದಾದರೂ ಅದನ್ನು ಮಾಡುತ್ತೇವೆಯೋ? ಜೀವನದ ಅತೀ ದೊಡ್ಡ ವಿಷಯಗಳ ನೋಟವನ್ನು ಕಳೆದುಕೊಳ್ಳುವಂತೆ ತಕ್ಷಣದ ಸಮಸ್ಯೆಗಳ ಬಗ್ಗೆ ಚಿಂತಿಸುವವರಾಗಿರುವೆವೋ? ಪಾಪದಿಂದ ವಿಮೋಚಿಸಲ್ಪಡಲಿಕ್ಕಾಗಿ ಬಯಸುವದಕ್ಕಿಂತ ಹೆಚ್ಚಾಗಿ ಕರಗಳಿಂದ, ನೋವಿನಿಂದ, ಘರ್ಷಣೆಯಿಂದ, ಚಿಂತೆಯಿಂದ ಬಿಡುಗಡೆ ಹೊಂದಲು ಬಯಸುವವರಾಗಿ ಕಂಡು ಕೊಳ್ಳುತ್ತೇವೆಯೋ? ಯೇಸುವನ್ನು ನಮ್ಮ ನಿರೀಕ್ಷೆಗಳಿಗೆ ಹೊಂದಿಕೊಳ್ಳುವಂತೆ ಮಾಡುವದನ್ನು ಹೇಳಿದರೆ ಮತ್ತು ನಮ್ಮ ಕಾರ್ಯ ಸೂಚಿಯನ್ನು ಅನುಸರಿಸಿದರೆ, ಆಗ ಆ ದಿನ ಪರ್ವತದ ಬಳಿಯಲ್ಲಿ ಐದು ಸಾವಿರ ಜನರು ಮಾಡಿದಂತೆ ನಾವು ಮಾಡುತ್ತೇವೆ. ... ಮತ್ತು ಯೇಸು ಅವರಿಂದ ಹೋಗಿ ಬಿಟ್ಟನು!

## ಮುಕ್ತಾಯ

ಸುಮಾರು ಎರಡು ವರ್ಷಗಳ ಹಿಂದೆ, 4-D ಸ್ಟೀರಿಯೊಗ್ರಾಮನ್ನು[4] ಮೊದಲನೆಯ ಸಲ ನೋಡಿದನು. ನಾನು ನನ್ನ ಕುಟುಂಬದೊಂದಿಗೆ ಒಂದು ಶಾಪ್ಪಿಂಗ್ ಮಾಲ್‌ಗೆ ಹೋಗಿದ್ದೆನು. ಪೋಸ್ಟರುಗಳನ್ನು ನೋಡುತ್ತಿದ್ದ ಒಂದು ಜನರ ಗುಂಪಿನ ಬಳಿಗೆ ನಾವು ಬಂದೆವು. ನೋಟದ ಚಿತ್ರಗಳೊಳಗೆ ಬಣ್ಣ ಬಣ್ಣಗಳ ಪೋಸ್ಟರುಗಳು ಇದ್ದವು. ನಾವು ಎಲ್ಲರೂ ಸುತ್ತಲೂ ನಿಂತುಕೊಂಡು, ದೃಷ್ಟಿಸಿದೆವು. ವಿಧಾನಗಳಲ್ಲಿ ಸುಂದರವಾದ ರೂಪಗಳು ಅಡಗಿರುವದನ್ನು ಕೆಲವರು ಕಂಡುಕೊಂಡರು, ಆದರೆ ಇತರರು ಅವುಗಳನ್ನು ಎಂದೂ "ನೋಡದವರಾಗಿದ್ದರು."

ಯೋಹಾನ 6:1-15 ಸ್ಟೀರಿಯೋ ಗ್ರಾಮದಂತಿದೆ. ಚಿತ್ರದ ಕೆಳಗೆ "ಜಯ!" ಎಂಬ ಒಂದೇ ಪದವಿತ್ತು. ನಾವು ಸುತ್ತಲೂ ನಿಂತು ಕೊಂಡು, ಅಡಗಿದ್ದ ರೂಪವನ್ನು ನೋಡುವ ಉದ್ದೇಶದಿಂದ ದೃಷ್ಟಿಸಿದೆವು. ನಾವು ಏನನ್ನು ನೋಡಲು ನಿರೀಕ್ಷಿಸಿದೆವು? ಕೆಲವರು ಬಹುಶಃ ಒಂದು ಡಾಲರಿನ ಚಿಹ್ನೆಯನ್ನು ನೋಡುವುದನ್ನು ನಿರೀಕ್ಷಿಸಿದರು, ಇತರರು ತಮ್ಮ ದೇಶದ ರಾಜಧಾನಿಯ ಕಟ್ಟಡವನ್ನು ನೋಡುವದನ್ನು ನಿರೀಕ್ಷಿಸಿದರು. ಕೆಲವರು ಅರಮನೆಯನ್ನು ನೋಡುವ ನಿಶ್ಚತೆಯುಳ್ಳವರಾಗಿದ್ದರು. ಇನ್ನು ಕೆಲವರು ಟ್ಯಾಂಕ್ಸ್ ಮತ್ತು ಬೊಂಬರುಗಳಿಂದ ಕೂಡಿದ್ದ ಸೈನ್ಯದ ನೋಟವನ್ನು ನೋಡಲು ನಿರೀಕ್ಷಿಸಿದರು. ಆಗ, ಒಬ್ಬರು ರೂಪವನ್ನು ನೋಡಲು ಪ್ರಾರಂಭಿಸಿದರು ಮತ್ತು "ನಾನು ಅದನ್ನು ನೋಡುತ್ತಿದ್ದೇನೆ" ಎಂದು ಗೊಣಗುಟ್ಟಿದರು. ಒಬ್ಬರ ನಂತರ ಒಬ್ಬರು, ಪ್ರತಿಯೊಬ್ಬರು ಚಿತ್ರವನ್ನು ನೋಡಲು ಪ್ರಾರಂಭಿಸುತ್ತಾರೆ. ಮತ್ತು ಅದು ಯಾರು ನಿರೀಕ್ಷಿಸದಂಥದ್ದಾಗಿತ್ತು. ಅದು "ಜಯ"ವು ಶಿಲುಬೆಯಾಗಿರುತ್ತದೆ.

---

ಟಿಪ್ಪಣಿಗಳು

[1]John Barton, Work Report, December 1994. [2]ಪದದ ಅರ್ಥ "ಒಬ್ಬ ಚಿಕ್ಕ ಚಿಕ್ಕ ಬಾಲಕ" ಎಂದಾಗುತ್ತದೆ. [3]ಯೋಹಾನ 1:40, 41; 12:20-22. [4]"Four-dimensional stereogram" ಇದು ಒಂದಕ್ಕಿಂತ ಹೆಚ್ಚು ಮಟ್ಟಗಳಲ್ಲಿ ದೃಷ್ಟಿಸಲ್ಪಡತಕ್ಕ ಒಂದು ಚಿತ್ರವಾಗಿದೆ. ಮೊದಲ ನೋಟಕ್ಕೆ, ಅದು ಸಾಮಾನ್ಯವಾಗಿ ಬಣ್ಣಗಳ ಮಿಶ್ರಣದಂತೆ ಕಾಣುತ್ತದೆ. ಸರಿಯಾದ ವಿಧಾನದ ಮುಖಾಂತರ ಒಬ್ಬನು ದಿಟ್ಟಿಸಿ ನೋಡಿದರೆ, ಒಂದು ಎರಡನೆಯ ಆಕಾರವು, ಒಂದು ಮೂರು ಆಯಾವುಗಳ ಚಿತ್ರವು, ಕೇಂದ್ರೀ ಕೃತವಾಗಿ ಬರುತ್ತದೆ.